**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವಾ. ಸಂಖ್ಯೆ:134/2021**

ಪಿ.ಡಬ್ಲೂ:01 ಶ್ರೀಮತಿ ಜೂಲಿಯಾ ಜಸಿಂತಾ

**ಸಾಕ್ಷಿಯನ್ನು ದಿನಾಂಕ: 03-06.2024 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಕೆ.ವಿ.ಪಿ ವಕೀಲರಿಂದ**

1. ನಾನು ಈ ದಾವೆಯನ್ನು ಪ್ರತಿವಾದಿಗಳಾದ ರಾಜೇಂದ್ರನ್ ಮತ್ತು ಸುರೇಶ್ ಬಾಬು ವಿರುದ್ದ ಹೂಡಿರುತ್ತೇನೆ. ಪ್ರತಿವಾದಿಗಳು 5 ನೇ ಅಡ್ಡ ರಸ್ತೆಯಲ್ಲಿರುವ ನನ್ನ ಕಾಂಪೌಂಡಿನಲ್ಲಿ ವಾಸ ಮಾಡುತ್ತಾರೆ. ಈ ದಾವೆಯ ಎ ದಾವಾ ಆಸ್ತಿಯು ನನ್ನ ತಂದೆಯವರಿಗೆ ಸೇರಿದ್ದಾಗಿರುತ್ತದೆ. ನನ್ನ ತಂದೆಯವರಿಗೆ ಸೇರಿದ ಒಟ್ಟು ಆಸ್ತಿಯ ವಿಸ್ತೀರ್ಣವು 40/78 feet ಆಗಿರುತ್ತದೆ. ಸದರಿ ಆಸ್ತಿಯಿಂದ ನನಗೆ 40/10 feet ನನಗೆ ಸೇರಿದ್ದಾಗಿರುತ್ತದೆ. ಸದರಿ 40/10 feet ಆಸ್ತಿಯನ್ನು ನನ್ನ ತಂದೆಯವರು ನನಗೆ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆ. ಸದರಿ ದಾನ ಪತ್ರವು ದಿಃ 30.03.1995 ರಂದು ಆಗಿರುತ್ತದೆ. ಸದರಿ ದಿನಾಂಕವಾದ 30.03.1995 ರಂದು ಒಟ್ಟು 3 ದಾಖಲೆಗಳನ್ನು ಮಾಡಲಾಗಿರುತ್ತದೆ.

2. ನಾನು ಈ ದಾವೆಯಲ್ಲಿ ದಿನಾಂಕಃ 30.03.1995 ರಂದು ಎಲ್ಲಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿತ್ತು ಎಂಬುವುದನ್ನು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನಾ ಎಂದರೆ ಕೊಟ್ಟಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಇರುವ ದಾಖಲೆಗಳನ್ನು ತೋರಿಸಿ ಆ ಸಮಯದಲ್ಲಿ ತನ್ನ ತಂದೆಯ ಹೆಸರಿನಲ್ಲಿರುವ ಆಸ್ತಿಯ ದಾಖಲೆಯನ್ನು ತೋರಿಸಲು ಹೇಳಲಾಗಿ ಸಾಕ್ಷಿಯು ಅದರಲ್ಲಿ ಇಲ್ಲ ಎನ್ನುತ್ತಾರೆ. ಸದರಿ ನಿಪಿ.1 ದಾನ ಪತ್ರದಂತೆ ನನ್ನ ಹೆಸರಿನಲ್ಲಿ ಆ ಆಸ್ತಿಗೆ ಸಂಬಂದ ಪಟ್ಟಂತೆ ಖಾತೆ ಆಗಿರುತ್ತದೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಇರುವ ದಾಖಲೆಗಳನ್ನು ತೋರಿಸಿ ತನ್ನ ಹೆಸರಿನಲ್ಲಿ ಖಾತೆ ಆದ ದಾಖಲೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನಾನು ಸದರಿ ಎ ಷೆಡ್ಯೂಲ್ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟಿಸಿದ್ದು ಅದರ ನಕಾಶೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಈಗಾಗಲೇ ಹಾಜರುಪಡಿಸಿದ ಕಟ್ಟಡದ ಪರವಾನಗಿಯಾದ ನಿಪಿ.9 ರಲ್ಲಿ ಸದರಿ ಆಸ್ತಿಯ ಸಂಖ್ಯೆ ಮತ್ತು ಅದರ ಚೆಕ್ಕುಬಂದಿ ಇಲ್ಲ ಎಂದರೆ ಸರಿ.

3. ಈ ದಾವೆಯಲ್ಲಿ ನಮೂದು ಮಾಡಿದ ಬಿ ಷೆಡ್ಯೂಲ್ ಆಸ್ತಿಗೆ ಸಂಬಂದ ಪಟ್ಟಂತೆ ಪ್ರತಿವಾದಿಗಳು ನನ್ನ ವಿರುದ್ದ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 102/2021 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಹೌದು. ನಾನು ಈ ಪ್ರಕರಣವನ್ನು ದಿಃ09.04.2021 ರಂದು ಹೂಡಿದ್ದು ಅಲ್ಲಿಯವರೆಗೆ ನಾನು ಸದರಿ ಅಸಲು ದಾವಾ ಸಂಖ್ಯೆ 102/2021 ರಲ್ಲಿ ಪ್ರತಿವಾದ ಪತ್ರವನ್ನು ಹಾಕಿರುವುದಿಲ್ಲ ಎಂದರೆ ಸರಿ. ಸದರಿ ಬಿ ಷೆಡ್ಯೂಲ್ ಆಸ್ತಿಯಲ್ಲಿ ಸರ್ಕಾರದಿಂದ ಪ್ರತಿನಿದಿಸುವ ಅದಿಕಾರಿಯವರು ಆ ಆಸ್ತಿಗೆ interference ಮಾಡಿದ ಕಾರಣ ಸದರಿ ಅಸಲು ದಾವೆ ಸಂಖ್ಯೆ 102/2021 ನ್ನು ಪ್ರತಿವಾದಿಗಳು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಪ್ರತಿವಾದಿಗಳು ನನಗೆ ಡ್ರೈನೇಜ್ ವ್ಯವಸ್ಥೆಗೆ ತೊಂದರೆ ಕೊಟ್ಟ ಕಾರಣ ಮುನಿಸಿಪಾಲಿಟಿಯವರು ಬಂದಿರುತ್ತಾರೆ ಎನ್ನುತ್ತಾರೆ. ಸದರಿ ವಿಚಾರಕ್ಕೆ ಸಂಬಂದಿಸಿದಂತೆ ನಗರಸಭೆ ರಾಬರ್ಟ್ ಸನ್ ಪೇಟೆ ಇಂದ ನನಗೆ ನಿಪಿ.10 ರಂತೆ ತಿಳುವಳಿಕೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನಿಪಿ.10 ಕ್ಕೆ ಸಂಬಂದಿಸಿದಂತೆ ನಾನು ನಗರಸಭೆ ರಾಬರ್ಟ್ ಸನ್ ಪೇಟೆಗೆ ಹೋಗಿ ದಾಖಲೆಗಳನ್ನು ಅವರಿಗೆ ಕೊಟ್ಟಿರುತ್ತೇನೆ. ನಾನು ನನಗೆ ಸೇರಿದ 10/40 feet ಆಸ್ತಿಗೆ ಸಂಬಂದ ಪಟ್ಟಂತೆ ಪೂರ್ಣವಾಗಿ

ಕಟ್ಟಡವನ್ನು ಕಟ್ಟಿರುತ್ತೇನೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಸೆಟ್ ಬ್ಯಾಕ್ ಮೊದಲೇ ಬಿಟ್ಟಿದ್ದರು ಎನ್ನುತ್ತಾರೆ.

4. ಸದರಿ ಸೆಟ್ ಬ್ಯಾಕನ್ನು ದಕ್ಷಿಣ ದಿಕ್ಕಿಗಾದಂತೆ 3 ಬಿಡಲಾಗಿರುತ್ತದೆ. ಸದರಿ ವಿಚಾರವನ್ನು ನಿಪಿ.1 ದಾನ ಪತ್ರದಲ್ಲಿ ನಮೂದಾಗಿದೆಯೇ ಎಂದರೆ ಸಾಕ್ಷಿಯು ಇಲ್ಲ ಅದು ನನ್ನ ತಂದೆಯವರ ಕ್ರಯ ಪತ್ರದಲ್ಲಿ ನಮೂದಿದೆ ಎನ್ನುತ್ತಾರೆ. ಸದರಿ 3 feet ಗೆ ಸಂಬಂದ ಪಟ್ಟಂತೆ ನನ್ನ ತಂದೆಯವರ ದಾಖಲೆಯಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ನಮಗೆ ಬಾಗವಾದ ಆಸ್ತಿಗಳ ಬಗ್ಗೆ ನಮೂದು ಇದ್ದು 3 feet ನ ಬಗ್ಗೆ ನಮೂದಿಲ್ಲ ಎನ್ನುತ್ತಾರೆ. ನಾನು ಇರುವ ತವಮ್ಮಲ್ ಕಾಂಪೌಂಡಿನಲ್ಲಿ ಉತ್ತರ ಮತ್ತು ದಕ್ಷಿಣಕ್ಕಾದಂತೆ ಕೆಲವು ಮನೆಗಳಿದ್ದು ಮಧ್ಯದಲ್ಲಿ ಒಂದು ಪ್ಯಾಸೇಜ್ ಇದೆ ಎಂದರೆ ಹೌದು. ಸದರಿ ಸ್ಥಳದ ಉತ್ತರದಲ್ಲಿ ಮೊದಲನೇಯ ಮನೆ ನನ್ನದು ಎಂದರೆ ಹೌದು. ಸದರಿ ನನ್ನ ಮನೆಗೆ ಹೋಗಲು ಆ ಪ್ಯಾಸೇಜ್ ಮಾತ್ರ ಇರುವುದು ಎಂದರೆ ಸಾಕ್ಷಿಯು ಆ ಪ್ಯಾಸೇಜ್ ನನ್ನ ತಂದೆಯವರಿಗೆ ಸೇರಿದ್ದು ಎನ್ನುತ್ತಾರೆ. ಸದರಿ ಪ್ಯಾಸೇಜನ್ನು 2000 ನೇ ಸಾಲಿನಲ್ಲಿ ನನ್ನ ತಂದೆಯವರು ನನಗೆ ಬಿಟ್ಟು ಕೊಟ್ಟಿರುತ್ತಾರೆ. ಈ ದಾವೆಯ ಎ ಷೆಡ್ಯೂಲ್ ಆಸ್ತಿಯಲ್ಲಿ ನಾನು ಮೊದಲು ಮನೆ ಕಟ್ಟಿರುತ್ತೇನೆ.

5. ಪ್ರತಿವಾದಿಗಳು ಯಾವ ಸಾಲಿನಲ್ಲಿ ಅವರ ಮನೆಗಳನ್ನು ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಆ ಸಮಯದಲ್ಲಿ ನಾನು ಬಧ್ರಾವತಿಯಲ್ಲಿ ಇದ್ದೆನು ಎನ್ನುತ್ತಾರೆ. ನಾನು 2018 ನೇ ಸಾಲಿನಲ್ಲಿ ಕೆಜಿಎಫ್ ಗೆ ಬಂದಿರುತ್ತೇನೆ. ನಾನು ಈ ದಾವೆಯನ್ನು ಆ ಪ್ಯಾಸೇಜನ್ನು ಯಾರು ಉಪಯೋಗಿಸಬಾರದು ಎಂದು ಹೇಳಿ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಆ ಪ್ಯಾಸೇಜ್ ನನಗೆ ಸೇರಿದ್ದು ಎಂದು ದಾವೆ ಹೂಡಿರುತ್ತೇನೆ ಎನ್ನುತ್ತಾರೆ. ಸದರಿ ಪ್ಯಾಸೇಜ್ 3 x 125 feet ಇರುತ್ತದೆ. ಸದರಿ ಪ್ಯಾಸೇಜನ್ನು ಅಲ್ಲಿ ಇರುವ ಪ್ರತಿವಾದಿಗಳು ಮತ್ತು ಇತರ ವಾಸ ಮಾಡುವವರು ಮಾತ್ರ ಉಪಯೋಗಿಸುತ್ತಿದ್ದು ಸಾರ್ವಜನಿಕರು ಉಪಯೋಗಿಸುತ್ತಿಲ್ಲ ಎಂದರೆ ಸರಿ.

6. ನಾನು ಎ ಷೆಡ್ಯೂಲ್ ಆಸ್ತಿಯಲ್ಲಿ ಪೂರ್ಣವಾಗಿ ಮನೆ ಕಟ್ಟಿದ ಕಾರಣ ನನಗೆ ಪ್ಯಾಸೇಜಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ ಅಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಖಂಡಿಕೆ -12 ನನ್ನ ವಾದ ಪತ್ರದಲ್ಲಿಇಲ್ಲ ಎಂದರೆ ಸರಿ. ಸದರಿ ಪ್ರಮಾಣ ಪತ್ರದ ಖಂಡಿಕೆ- 12 ಕ್ಕೆ ಸಂಬಂದ ಪಟ್ಟಂತೆ ಅಸಲು ದಾವೆ ಸಂಖ್ಯೆ 497/2023 ಎಂಬ ದಾವೆಯು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಕೆಜಿಎಫ್ ನಲ್ಲಿ ಹೂಡಿರುತ್ತೇನೆ ಎಂದರೆ ಹೌದು.

7. ನಾನು ಈ ದಾವೆಯಲ್ಲಿ ನಿಪಿ.17 ರಂತೆ ಒಂದು ಅಂತಿಮ ವರದಿಯನ್ನು ಮತ್ತು ನಿಪಿ.18, 19 ರಂತೆ ಅಸಲು ದಾವೆ ಸಂಖ್ಯೆ 497/2023 ರ ಆರ್ಡರ್ ಶೀಟ್ ಮತ್ತು ವಾದ ಪತ್ರವನ್ನು ಹಾಜರುಪಡಿಸಿರುತ್ತೇನೆ. ಎಂದರೆ ಹೌದು. ನಿಪಿ.19 ರಲ್ಲಿ ಆ ದಾವೆಯ ಬಿ ಷೆಡ್ಯೂಲ್ ಪ್ರಾಪರ್ಟಿಯ ವಿಸ್ತೀರ್ಣವನ್ನು 40 x 6.05 feet ಎಂದು ಈ ದಾವೆಯ ಬಿ ಷೆಡ್ಯೂಲ್ ಆಸ್ತಿಯನ್ನು 40 x 03 feet ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವು ಎರಡೂ ಆಸ್ತಿಗಳು ಬೇರೆ ಬೇರೆ ಎನ್ನುತ್ತಾರೆ. ನಾನು ನನ್ನ ಮನೆಗೆ ಸಿಸಿ ಟಿವಿ ಕ್ಯಾಮೆರಾ ಹಾಕಿರುತ್ತೇನೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ಚಾಯ ಚಿತ್ರಗಳು ನನ್ನ ಸದರಿ ಸಿಸಿ ಟಿವಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದೆಯಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ನನ್ನ ಸಿಸಿಟಿವಿ ಕ್ಯಾಮೆರಾವನ್ನು ಆನ್ ಮಾಡಿರುವುದಿಲ್ಲ ಎನ್ನುತ್ತಾರೆ. ಸದರಿ ಚಾಯ ಚಿತ್ರಗಳನ್ನು ನಾನೇ ನನ್ನ ಮೊಬೈಲ್ ನಲ್ಲಿ ತೆಗೆದಿದ್ದು ದಿನಾಂಕ ನೆನಪಿಲ್ಲ. ನಾನು ನಿಪಿ.14 ಛಾಯ ಚಿತ್ರವನ್ನು ಬಿಟ್ಟು ಅದರ ಮುಂದೆ ಇರುವ ವಿವರದ ಛಾಯ ಚಿತ್ರ ತೆಗೆದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ಮನೆಯ 3 ಕಿಟಕಿಗಳನ್ನು ಪ್ರತಿವಾದಿಗಳು ನಿಪಿ.14 ರಲ್ಲಿ ಇರುವಂತೆ ಶೀಟ್ ಹಾಕಿ ಮುಚ್ಚಿರುತ್ತಾರೆ ಎನ್ನುತ್ತಾರೆ. ಸದರಿ ನಿಪಿ.14 ರಲ್ಲಿರುವ ಶೀಟನ್ನು ಪ್ರತಿವಾದಿಗಳು, ನಾನು ಈ ಪ್ರಕರಣವನ್ನು ಹಾಕಿದ ನಂತರ ಅಂದರೆ 2022 ನೇ ಸಾಲಿನಲ್ಲಿ ಹಾಕಿರುತ್ತಾರೆ.

8. ಸದರಿ ನಿಪಿ.14 ರ 3 ಕಿಟಕಿಗಳನ್ನು ನನ್ನ ಕಟ್ಟಡದ ನಕಾಶೆಯಲ್ಲಿ ತೋರಿಸಲಾಗಿರುತ್ತದೆ. ಸದರಿ ನಿಪಿ.14 ರಲ್ಲಿರುವ ಪ್ಯಾಸೇಜಿನಲ್ಲಿ ಹೋಗುವಾಗ ನನ್ನ ಕಿಚನ್ನಿನ, ಬೆಡ್ ರೂಂ, ವರಾಂಡದ ಕಿಟಕಿಗಳಲ್ಲಿ ಎಲ್ಲಾ ಕಾಣುತ್ತದೆ ಎಂದರೆ ಹೌದು. ಸದರಿ ನಿಪಿ.14ರ ಪ್ಯಾಸೇಜನ್ನು ನಾನು ಮುಚ್ಚಲು ಪ್ರಯತ್ನಿಸಿದಾಗ ಪ್ರತಿವಾದಿಗಳು ತಕರಾರು ಮಾಡಿದ್ದು ಅದಕ್ಕೆ ಸಂಬಂದಿಸಿದಂತೆ ನಗರಸಭಾ ಕಾರ್ಯಾಲಯದವರು ನಿಪಿ.10 ನ್ನು ನನಗೆ ಕೊಡುವ ಮೊದಲು ಆ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸುಳ್ಳು. ಸದರಿ ನಗರಸಭಾ ಕಾರ್ಯಾಲಯದ ಯಾರು ಕೂಡ ಇಲ್ಲಿಯವರೆಗೆ ಬಂದು ಸದರಿ ಪ್ಯಾಸೇಜನ್ನು ನೋಡಿರುವುದಿಲ್ಲ. ನನ್ನ ಮನೆಗೆ ಸೇರಿದ ಡ್ರೈನೇಜ್ ಸುಮಾರು 4 ವರ್ಷಗಳಿಂದ ಮುಚ್ಚಿರುತ್ತದೆ. ಸದರಿ ಡ್ರೈನೇಜ್‌ನ್ನು ನಾನು ಮೋರಿಗೆ ಬಿಡುತ್ತಿದ್ದು ಅಲ್ಲಿಂದ ಸುಮಾರು 15 ದಿವಸಗಳಿಗೊಮ್ಮೆ ನಾನು ಕೆಲವರಿಂದ ಕ್ಲೀನ್ ಮಾಡಿಸುತ್ತೇನೆ. ಸದರಿ ಒಳಚರಂಡಿಗೆ ಸಂಬಂದ ಪಟ್ಟಂತೆ ನಾನು ಸುಮಾರು 2 ವರ್ಷಗಳ ಹಿಂದೆ ಸಂಬಂದ ಪಟ್ಟ ಮುನಿಸಿಪಾಲಿಟಿಗೆ ಹೋಗಿ ಮೌಖಿಕವಾಗಿ ಹೇಳಿ ಬಂದಿರುತ್ತೇನೆ. ಅದಕ್ಕೆ ಸಂಬಂದಪಟ್ಟಂತೆ ದಾವೆಗಳು ಇರುವ ಕಾರಣ ನಾವು ಯಾವುದೇ ಕ್ರಮವನ್ನು ಕೈಗೊಳ್ಳಲು ಆಗುವುದಿಲ್ಲ ಎಂದು ಸದರಿ ನಗರಸಭೆಯವರು ಹೇಳಿರುತ್ತಾರೆ. ಸದರಿ ನನ್ನ ಪ್ರಕಾರ ಆ ಒಳಚರಂಡಿಯಲ್ಲಿ ಇರುವ ಗಲೀಜು ನನ್ನ ಮನೆಗೆ ಸಂಬಂದ ಪಟ್ಟದ್ದು ಪ್ರತಿವಾದಿಗಳಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತಿವಾದಿಗಳು ಅದಕ್ಕೆ ತಕರಾರು ಮಾಡುತ್ತಾರೆ ಎನ್ನುತ್ತಾರೆ.

9. ಸದರಿ ಒಳಚರಂಡಿಗೆ ಸಂಬಂದ ಪಟ್ಟಂತೆ ನಾನು ನಗರಸಭಾ ಕಾರ್ಯಾಲಯದ ವಿರುದ್ಧ ಯಾವುದೇ ಕಾನೂನು ಕ್ರಮಕೈಗೊಂಡಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳು ನನ್ನ ದಾವೆಗೆ ಸಂಬಂದ ಪಟ್ಟದ್ದಲ್ಲ ಎಂದರೆ ಸರಿ ಅಲ್ಲ. ನಿಪಿ.1 ದಾನ ಪತ್ರವು ನನ್ನ ಮತ್ತು ನನ್ನ ಒಡಹುಟ್ಟಿದವರಿಗೆ ಸಂಬಂದ ಪಟ್ಟ ಕಾರಣ ಅದು ಈ ದಾವೆಗೆ ಪೂರಕವಾದದ್ದು ಅಲ್ಲ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರಿದು ನನ್ನ ತಂದೆಯ ಆಸ್ತಿಯ ಬಗ್ಗೆ ಗೊತ್ತಾಗಲು ಸದರಿ ದಾಖಲೆಯನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ನಿಪಿ.1 ಕ್ಕೆ ಸಂಬಂದ ಪಟ್ಟಂತೆ ನನ್ನ ತಂದೆಯವರ ಎಲ್ಲಾ ಆಸ್ತಿಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳು ಹಾಕಿದ ಅಸಲು ದಾವಾ ಸಂಖ್ಯೆ 102/2021 ಕ್ಕೆ ವಿರುದ್ದವಾಗಿ ಅವರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ವಾದ ಪತ್ರದಲ್ಲಿ ಸದರಿ ಅಸಲು ದಾವೆ ಸಂಖ್ಯೆ 102/2021 ರ ಬಗ್ಗೆ ಅದರಲ್ಲಿ ಹಾಜರಾಗಿದ್ದರೂ ಸಹ ಈ ದಾವೆಯಲ್ಲಿ ಅದರ ಬಗ್ಗೆ ಹೇಳಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನಮೂದು ಮಾಡಿದ ಬಿ ಷೆಡ್ಯೂಲ್ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**